# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2741

ಸದಸ್ಯರ ಹೆಸರು : ಶ್ರೀ.ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 28.03.2022

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಾರ್ಚ್-2022ನೇ ಮಾಹೆಯ ಮೊದಲೆರಡು ವಾರಗಳಲ್ಲಿ ರಾಮನಗರ ಮತ್ತು ಕನಕಪುರ ತಾಲ್ಲೂಕುಗಳ ಕೆಲವು ಗ್ರಾಮಗಳಿಗೆ ಆನೆಗಳ ಹಿಂಡು ದಾಳಿ ಮಾಡಿ ಕೆಲವರ ಮನೆ ಗೋಡೆಗಳು, ಜಮೀನಿನಲ್ಲಿರುವ ಶೆಡ್‌ಗಳು, ಜಮೀನಿಗೆ ಅಳವಡಿಸಿರುವ ಪಂಪ್‌ಸೆಟ್ಟು ಪೈಪುಗಳನ್ನು, ರೈತರು ಬೆಳೆದಿರುವ ಬಾಳೆ, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳನ್ನೂ ನಾಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಪ್ರಕರಣಗಳಲ್ಲಿ ಆನೆಗಳ ದಾಳಿಯಿಂದ ನಷ್ಟವಾಗಿರುವ ಮನೆ ಗೋಡೆಗಳು, ಜಮೀನಿನಲ್ಲಿರುವ ಶೆಡ್‌ಗಳು, ಜಮೀನಿಗೆ ಅಳವಡಿಸಿರುವ ಪಂಪ್ ಸೆಟ್ಟು ಪೈಪುಗಳು, ಬಾಳೆ, ತೆಂಗು, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳ ನಾಶದ ಪ್ರಮಾಣ ವೆಷ್ಟು; ಇವುಗಳ ಮೌಲ್ಯವೆಷ್ಟು; ನಷ್ಟ ಹೊಂದಿರುವ ರೈತರಿಗೆ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಕಾಡಾನೆ ಹಾವಳಿಯಿಂದ ನಷ್ಟವಾಗಿರುವ ಮನೆ ಗೋಡೆ, ಜಮೀನಿನಲ್ಲಿರುವ ಶೆಡಗಳು- ಜಮೀನಿಗೆ ಅಳವಡಿಸಿರುವ ಪಂಪ್ ಸೆಟ್ ಪೈಪುಗಳು, ರೈತರು ಬೆಳೆದಿರುವ ಬಾಳೆ, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳ ನಾಶ ಪ್ರಕರಣ ಹಾಗೂ ಪಾವತಿಸಿದ ದಯಾತ್ಮಕ ಧನದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಇ) | ಈ ಭಾಗದಲ್ಲಿ ಕಾಡಾನೆಗಳ ನಿಯಂತ್ರಣಕ್ಕೆ ಅನೇಕ ಬಾರಿ ಮನವಿ ಮಾಡಿದ್ದರೂ ಅರಣ್ಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯವಹಿಸುತ್ತಿದ್ದು, ಇದರಿಂದ ರೈತರು ಕೃಷಿ ಉಪಕರಣಗಳು ಮತ್ತು ಬೆಳೆದ ಬೆಳೆಗಳನ್ನು ಕಳೆದುಕೊಂಡು ಸರ್ಕಾರ ನೀಡುವ ಪರಿಹಾರಕ್ಕಾಗಿ ವರ್ಷಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಆನೆಗಳ ಹಾವಳಿಗೆ ಕಡಿವಾಣ ಹಾಕಿ; ರೈತರಿಗೆ ಸೂಕ್ತ ಪರಿಹಾರ ಹಣವನ್ನು ಶೀಘ್ರವಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು. | ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಿಗೆ 'ಇ-ಪರಿಹಾರ' ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ನಿಯಮಾನುಸಾರ ಪರಿಶೀಲಿಸಿ. ಶೀಘ್ರವೇ ನೇರವಾಗಿ ಸಂತ್ರಸ್ತರ ಖಾತೆಗೆ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.<br><br>ಅದರಂತೆ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಗಳಿಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ನಿಯಮಾನುಸಾರ ಪರಿಶೀಲಿಸಿ ದಯಾತ್ಮಕ ಧನವನ್ನು ಆಯಾ ವರ್ಷದಲ್ಲಿಯೇ ಪಾವತಿಸಲಾಗುತ್ತಿರುತ್ತದೆ. 2021-22ನೇ ಸಾಲಿನಲ್ಲಿ ಬಾಕಿ ಇರುವ ಪ್ರಕರಣಗಳಿಗೆ ಪರಿಹಾರ ಧನ ಪಾವತಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ರಾಮನಗರ ವಿಭಾಗಕ್ಕೆ ರೂ.249.34 ಲಕ್ಷ, ಬನ್ನೇರುಘಟ್ಟ ಉದ್ಯಾನವನಕ್ಕೆ ರೂ.36.85 ಲಕ್ಷ ಮತ್ತು ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರೂ.36.00 ಲಕ್ಷಗಳ ಅನುದಾನವನ್ನು ದಿನಾಂಕ: 16/03/2022 ರಂದು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ಆದ್ಯತೆ ಮೇರೆಗೆ ದಯಾತ್ಮಕ ಧನ ಪಾವತಿಸುವ ಕ್ರಮ ಚಾಲ್ತಿಯಲ್ಲಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

ಆದಾಗ್ಯೂ, ಕಾಡಾನೆಗಳ ನಿಯಂತ್ರಣಕ್ಕಾಗಿ ಕೈಗೊಂಡ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:-

1. ರಾಮನಗರ ವಿಭಾಗದಲ್ಲಿ 20 ಕಿ.ಮೀ ಆನೆ ಕಂದಕ ನಿರ್ಮಿಸಿ ನಿರ್ವಹಿಸಲಾಗುತ್ತಿದೆ.

2. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ 21 ಕಿ.ಮೀ. ಆನೆ ಕಂದಕ ನಿರ್ಮಿಸಿ ನಿರ್ವಹಿಸಲಾಗುತ್ತಿದೆ ಮತ್ತು 7 ಕಿ.ಮೀ ಸೋಲಾರ್ ಟೆಂಟಕಲ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.

3. ಅಲ್ಲದೇ ರಾಮನಗರ ವಿಭಾಗದಲ್ಲಿ ಕಾಡಾನೆ ದಾಳಿಯಿಂದ ಬೆಳೆಹಾನಿ ಹೊಂದಿರುವ 81 ರೈತರಿಗೆ ಸೋಲಾರ್ ಬೇಲಿ ನಿರ್ಮಾಣ ಮಾಡಿಕೊಳ್ಳಲು, ಎನರ್ಜಿ ಬ್ಯಾಟರಿ, ಪ್ಯಾನಲ್ ಮತ್ತು ಚಾರ್ಜರ್‌ಗಳನ್ನು ಒದಗಿಸಿಕೊಡಲಾಗಿದೆ.

ಕನಕಪುರ ತಾಲ್ಲೂಕು ವ್ಯಾಪ್ತಿಗೊಳಪಡುವ ಸಂಗಮ ಮತ್ತು ಮುಗ್ಗೂರು ವನ್ಯಜೀವಿ ವಲಯಗಳಲ್ಲಿ ಕಾಡಾನೆಗಳ ನಿಯಂತ್ರಣಕ್ಕಾಗಿ ಕೈಗೊಂಡ ಕಾಮಗಾರಿಗಳ ವಿವರ ಕೆಳಗಿನಂತಿದೆ:-

(ಭೌತಿಕ ಗುರಿ ಕಿ.ಮೀ.ಗಳಲ್ಲಿ)

| **ಕಾಮಗಾರಿ** | **ಸಂಗಮ** | **ಮುಗ್ಗೂರು** |
|---|---|---|
| ರೈಲ್ವೆ ಬ್ಯಾರಿಕೇಡ್ | 9.668 | 4.67 |
| ಟೆಂಟಕಲ್ ಸೋಲಾರ್ ಫೆನ್ಸ್ | 4.00 | 3.30 |
| ಸೋಲಾರ್ ತಂತಿಬೇಲಿ ನಿರ್ವಹಣೆ | 1.00 | 6.00 |
| ಆನೆ ತಡೆಕಂದಕ | 18.00 | 3.42 |
| ಆನೆ ಹಿಮ್ಮೆಟ್ಟಿಸುವ ತಂಡ | 2 ತಂಡ | 1 ತಂಡ |

ಕ್ಷೇತ್ರ ಅಧಿಕಾರಿ / ಸಿಬ್ಬಂದಿಗಳಿಂದ ಹಗಲು ಮತ್ತು ರಾತ್ರಿ ಗಸ್ತು ಕಾರ್ಯ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ಅಪಜೀ 80 ಎಫ್‌ಡಬ್ಲ್ಯೂಎಲ್ 2022**

**(ಉಮೇಶ್ ವಿ. ಕತ್ತಿ)**
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ

## ಕಾಡಾನೆ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಗಳಿಗೆ ಪಾವತಿಸಲಾದ ದಯಾತ್ಮಕ ಧನದ ವಿವರ

| ಕ್ರ. ಸಂ. | ವಿಭಾಗ | ತಾಲ್ಲೂಕು | ಬೆಳೆ ನಷ್ಟ | ಪ್ರಕರಣ | ಪ್ರಮಾಣ | ಪರಿಹಾರ ಮೊತ (ರೂ.ಗಳಲ್ಲಿ) | ಆಸ್ತಿ ನಷ್ಟ | ಪ್ರಕರಣ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|---|---|
| 1 | ರಾಮನಗರ | ಕನಕಪುರ | ರಾಗಿ | 8 | 14 ಕ್ವಿಂಟಾಲ್ | 16.800 | – | – | – |
| | | | ಮಾವು | 4 | 30 ಮರಗಳು | 15.000 | | | |
| | | | ಬಾಳೆ | 5 | 400 ಗುಳಿ | 55,000 | | | |
| | | | ತೆಂಗು | 3 | 10 ಮರ 8 ರಿಂದ 9 ವರ್ಷ | 8.000 | | | |
| | | ರಾಮನಗರ | ಜೋಳ | 2 | 29 ಕ್ವಿಂಟಾಲ್ | 35.960 | ಗೇಟ್. ಕಾಲರ್. ಗೇಟ್‌ವಾಲ್. ಜಿ.ಎ.ಪೈಪ್, ಎಲೆಕ್ಟ್ರಿಲ್ ಕೇಬಲ್. ಪಿವಿಸಿ ಪೈಪ್. ಮೋಟಾರ್ ಪಂಪ್. ಮುಳ್ಳುತಂತಿ ಬೇಲಿ. ಕೇಬಲ್ ವೈರ್ | 2 | 1,10,000 |
| | | | ರಾಗಿ | 2 | 4 ಕ್ವಿಂಟಾಲ್ | 4.800 | | | |
| | | | ಮಾವು | 5 | 45 ಮಾವಿನ ಮರ & ಗಿಡ | 25.000 | | | |
| | | | ಬಾಳೆ | 11 | 595 ಬಾಳೆಗಿಡ | 95.200 | | | |
| | | | ತೆಂಗು | 9 | 96 ತೆಂಗು | 75.000 | | | |
| | | | ಇತರೆ | 1 | 10 ಗಿಡಗಳಂದೆ 150 ರಿಂದ 200 ಕೆ.ಜಿ & 20 ಪಪ್ಪಾಯ ಗಿಡ. ಹಲಸಿನ ಫಸಲು. 5 ಕ್ವಿಂಟಾಲ್ ಟೊಮೊಟೋ & ಸೌತೆಕಾಯಿ | 15.000 | | | |
| 2 | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | ಕನಕಪುರ (ಹಾರೋಹಳ್ಳಿ ಮತ್ತು ಕೋಡಿಹಳ್ಳಿ ವನ್ಯಜೀವಿ ವಲಯ) | ತೆಂಗು | 27 | 152 ಸಸಿ/ಗಿಡಗಳು | 81.528 | ಪ್ಲಾಸಿಕ್ ಪೈಪ್. ಬೋರ್‌ವೆಲ್ ಮತ್ತು ತಂತಿ ಬೇಲಿ | 6 | 58.320 |
| | | | ಬಾಳೆ | 7 | 226 | 30.928 | | | |
| | | | ರಾಗಿ | 1 | 1 ಕ್ವಿಂಟಾಲ್ | 1.200 | | | |
| | | | ಟೊಮೆಟೊ | 2 | 10.50 ಕ್ವಿಂಟಾಲ್ | 10.304 | | | |
| | | | ಕಬ್ಬು | 1 | 10 ಕ್ವಿಂಟಾಲ್ | 1.623 | | | |
| 3 | ಕಾವೇರಿ ವನ್ಯಜೀವಿ ವಿಭಾಗ | ಸಂಗಮ ಮತ್ತು ಮುಗ್ಗೂರು ವನ್ಯಜೀವಿ ವಲಯ | ತೆಂಗು | – | 59 | 64.560 | ಕಲ್ಲುಕಂಬ | 10 | 5.000 |
| | | | ಬಾಳೆ | – | 230 | 36.800 | ಬೋರ್ ವೆಲ್. ಪಂಪ್ ಸೆಟ್ ಹಾಗೂ ಇತರೆ | 2 | 21.500 |
| | | | ಭತ್ತ | – | 6 ಕ್ವಿಂಟಾಲ್ | 7.920 | ಪೈಪು | 4 | 7.500 |
| | | | ಮೆಕ್ಕಜೋಳ | – | 4 ಕ್ವಿಂಟಾಲ್ | 4.950 | | | |
| | | | ಸೌತೆ | – | 50 ಕ್ವಿಂಟಾಲ್ | 5.000 | | | |
| | | | ಟಮೋಟ | – | 5 ಕ್ವಿಂಟಾಲ್ | 2,940 | | | |

24/3/22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ ಬೆಂಗಳೂರು